# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006

ಸಂಖ್ಯೆ:ಕರಾಮುವಿ/ಪವಿ/5.1/ಎಲ್ಲಾ.ಎಸ್ಸಿ//ಪ.ಪ/119/2019-20. ದಿನಾಂಕ:-12-08-2020

## ಅಧಿಸೂಚನೆ

**ವಿಷಯ:- 2014-15ನೇ ಶೈಕ್ಷಣಿಕ ಸಾಲಿನ ಎಂ.ಎಸ್ಸಿ., ಪದವಿಗಳ ನಾಲ್ಕನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ (ಎಂ.ಎಸ್ಸಿ ಮನೋವಿಜ್ಞಾನ ಪದವಿ ಹೊರತುಪಡಿಸಿ) ಪರೀಕ್ಷಾ ಶುಲ್ಕ ಪಾವತಿಸುವ ಬಗೆಗೆ.**

**ಉಲ್ಲೇಖ:- ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 21-03-2020.**

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2014-15ನೇ ಶೈಕ್ಷಣಿಕ ಸಾಲಿನ ಎಂ.ಎಸ್ಸಿ ಪದವಿಗಳ ನಾಲ್ಕನೇ ಸೆಮಿಸ್ಟರ್ (ಎಂ.ಎಸ್ಸಿ ಮನೋವಿಜ್ಞಾನ ಪದವಿ ಹೊರತುಪಡಿಸಿ) ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಲು ತಿಳಿಸಲಾಗಿದೆ.

ಸದರಿ ವಿದ್ಯಾರ್ಥಿಗಳಿಗೆ ಮುಂದಿನ ದಿನಗಳಲ್ಲಿ ಪರೀಕ್ಷೆಗಳನ್ನು ನಿಗಧಿಪಡಿಸಲಾಗಿದ್ದು, ಈ ಸಂಬಂಧ ಪರೀಕ್ಷಾ ಶುಲ್ಕ ಪಾವತಿಸುವ ದಿನಾಂಕಗಳು ಮತ್ತು ಪಾವತಿಸಬೇಕಾಗಿರುವ ಶುಲ್ಕದ ವಿವರಗಳು ಈ ಕೆಳಕಂಡಂತಿದ್ದು, ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್ www.ksoumysuru.ac.inನಲ್ಲಿ ಪರೀಕ್ಷಾ ಅರ್ಜಿ ಮತ್ತು ಪರೀಕ್ಷಾ ಶುಲ್ಕವನ್ನು ಎಲ್ಲಾ ಅಗತ್ಯ ವಿವರಗಳೊಂದಿಗೆ ಭರ್ತಿಮಾಡಿ ಕಡ್ಡಾಯವಾಗಿ ಅಂತರ್ಜಾಲದ **(Online)** ಮೂಲಕವೇ ಸಲ್ಲಿಸುವುದು. ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸುವಾಗ ತೊಂದರೆಗಳು ಎದುರಾದಲ್ಲಿ ಆನ್‌ಲೈನ್ ಸಹಾಯವಾಣಿ ಸಂಖ್ಯೆ **9663482133, 9663482311** ಯನ್ನು ಸಂಪರ್ಕಿಸುವುದು.

| | |
|---|---|
| ಪರೀಕ್ಷಾ ಶುಲ್ಕ ಪಾವತಿಸುವ ಪ್ರಾರಂಭದ ದಿನಾಂಕ: | 12-08-2020 |
| ದಂಡ ಶುಲ್ಕವಿಲ್ಲದೆ ಪಾವತಿಗೆ ಕಡೆ ದಿನಾಂಕ: | 28-08-2020 |
| ರೂ.200/-ದಂಡ ಶುಲ್ಕದೊಂದಿಗೆ ಪಾವತಿಗೆ ಕಡೆ ದಿನಾಂಕ: | 05-09-2020 |

1. **2020 ಸಾಲಿನಲ್ಲಿ ಪ್ರಾರಂಭವಾಗುವ ಎಂ.ಎಸ್ಸಿ ಪದವಿಗಳ ಪರೀಕ್ಷಾ ದಿನಾಂಕಗಳ ವೇಳಾಪಟ್ಟಿಯನ್ನು ವಿ.ವಿ. ನಿಲಯದ ಅಂತರ್ಜಾಲ www.ksoumysuru.ac.in ಪ್ರಕಟಿಸಲಾಗುವುದು.**
2. **ಮೈಸೂರು ಪರೀಕ್ಷಾ ಕೇಂದ್ರದಲ್ಲಿ ಮಾತ್ರ ಪರೀಕ್ಷೆಯನ್ನು ನಡೆಸಲು ನಿಗಧಿಪಡಿಸಿದೆ.**

### ವಿದ್ಯಾರ್ಥಿಗಳು ಪಾವತಿಸಬೇಕಾಗಿರುವ ಪರೀಕ್ಷಾ ಶುಲ್ಕಗಳ ಕೋಷ್ಟಕ

| ಕ್ರಮ ಸಂಖ್ಯೆ | ಪದವಿಗಳು | ಪೂರ್ಣಪರೀಕ್ಷೆಗೆ ರೂ.ಗಳಲ್ಲಿ |
|---|---|---|
| 01 | ಎಂ.ಎಸ್ಸಿ., ಗಣಿತ ಶಾಸ್ತ್ರ | 2,000/- |
| 02 | ಎಂ.ಎಸ್ಸಿ., ಭೌತ ಶಾಸ್ತ್ರ | 2,000/- |
| 03 | ಎಂ.ಎಸ್ಸಿ., ರಸಾಯನ ಶಾಸ್ತ್ರ | 2,000/- |
| 04 | ಎಂ.ಎಸ್ಸಿ., ಜೈವಿಕ ತಂತ್ರಜ್ಞಾನ | 2,000/- |
| 05 | ಎಂ.ಎಸ್ಸಿ., ಸೂಕ್ಷ್ಮಜೀವ ಶಾಸ್ತ್ರ | 2,000/- |
| 06 | ಎಂ.ಎಸ್ಸಿ., ಮಾಹಿತಿ ವಿಜ್ಞಾನ | 2,000/- |
| 07 | ಎಂ.ಎಸ್ಸಿ., ಆಹಾರ ಮತ್ತು ಪೌಷ್ಠಿಕತೆ | 2,000/- |
| 08 | ಎಂ.ಎಸ್ಸಿ., ಗಣಕ ವಿಜ್ಞಾನ | 2,000/- |
| 09 | ಎಂ.ಎಸ್ಸಿ., ಪರಿಸರ ವಿಜ್ಞಾನ | 2,000/- |
| 10 | ಎಂ.ಎಸ್ಸಿ., ಭೂಗೋಳ ಶಾಸ್ತ್ರ | 2,000/- |
| 11 | ಎಂ.ಎಸ್ಸಿ., ಜೈವಿಕ ರಸಾಯನ ಶಾಸ್ತ್ರ | 2,000/- |

### ಸೂಚನೆಗಳು

1. ಕೇಂದ್ರ/ರಾಜ್ಯ ಸರ್ಕಾರವು ಆಗಿಂದ್ದಾಗೆ ಹೊರಡಿಸುವ ಕೋವಿಡ್-19 ನಿರ್ವಹಣೆಯ ನಿಯಮಗಳನ್ನು ಹಾಗೂ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
2. ಅಂತರ್ಜಾಲ **(Online)**ದಲ್ಲಿ ಪರೀಕ್ಷಾ ಅರ್ಜಿ ಭರ್ತಿ ಮಾಡಿ ಶುಲ್ಕ ಪಾವತಿಸಿದ ನಂತರ ಬರುವ ವಿವರದ ಪ್ರತಿಯನ್ನು ಕುಲಸಚಿವರು(ಪರೀಕ್ಷಾಂಗ) ಕರಾಮುವಿ, ಮುಕ್ತ ಗಂಗೋತ್ರಿ, ಮೈಸೂರು-06 ಇಲ್ಲಿಗೆ ಕಡ್ಡಾಯವಾಗಿ ಖುದ್ದಾಗಿ ಅಥವಾ ಅಂಚೆಯ ಮೂಲಕ ಕಳುಹಿಸತಕ್ಕದ್ದು.
3. ವಿಶ್ವವಿದ್ಯಾನಿಲಯವು ನೀಡಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪರೀಕ್ಷೆಗೆ ತರುವುದು.
4. ವಿದ್ಯಾರ್ಥಿಯು ಆನ್‌ಲೈನ್ ಮೂಲಕ ಶುಲ್ಕ ಪಾವತಿಸಿ ಸಲ್ಲಿಸಿದ ಅರ್ಜಿಯ ಒಂದು ಪ್ರತಿಯನ್ನು ಹೊಂದಿರತಕ್ಕದ್ದು.

5. ವಿವಿ ನಿಲಯಕ್ಕೆ ನೇರವಾಗಿ / ಅಂಚೆ ಮೂಲಕ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.

6. ಪರೀಕ್ಷಾ ಶುಲ್ಕವನ್ನು ಯಾವ ಕಾರಣದಿಂದಲೂ ಮರುಪಾವತಿ ಮಾಡಲಾಗುವುದಿಲ್ಲ ಹಾಗೂ ಅದನ್ನು ಮುಂದಿನ ಪರೀಕ್ಷೆಗೆ ಮರುಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.

7. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ವಿನಾಯಿತಿ ಸೌಲಭ್ಯ ಪಡೆಯಲು ತಾವು ಪ್ರವೇಶಾತಿ ಪಡೆದ ಸಾಲಿನಲ್ಲಿಯೇ ಕಡ್ಡಾಯವಾಗಿ ಪರೀಕ್ಷೆ ಬರೆದು ತೇರ್ಗಡೆಯಾಗಿರಬೇಕು. ಪ್ರವೇಶ ಪಡೆದ ಸಾಲಿನಲ್ಲಿಯೇ ಹಾಗೂ ವ್ಯಾಸಂಗಾವಧಿಯಲ್ಲಿಯೇ ಪರೀಕ್ಷೆ ಬರೆಯದೇ ನಂತರದ ಪ್ರಯತ್ನದಲ್ಲಿ ಬರೆದಲ್ಲಿ, ಪರೀಕ್ಷಾ ಶುಲ್ಕ ವಿನಾಯಿತಿ ಅರ್ಹತೆ ಇರುವುದಿಲ್ಲ.

8. 2014-15ನೇ ಸಾಲಿನ ಎಂ.ಎಸ್ಸಿ ಪದವಿಗೆ ಶುಲ್ಕ ವಿನಾಯಿತಿಯಿಂದ ಪ್ರವೇಶಾತಿ ಪಡೆದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು ಪರೀಕ್ಷಾ ಸೇವಾ ಶುಲ್ಕವಾಗಿ ರೂ. 50/-(ಐವತ್ತು ರೂಪಾಯಿಗಳು ಮಾತ್ರ)ಗಳನ್ನು ಕಡ್ಡಾಯವಾಗಿ ಪಾವತಿಸುವುದು. ತಪ್ಪಿದಲ್ಲಿ, ಅಂತಹವರ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

9. 2014-15ನೇ ಸಾಲಿನ ಎಂ.ಎಸ್ಸಿ ಪದವಿಗೆ ಶುಲ್ಕ ವಿನಾಯಿತಿ ಪಡೆಯದೇ ಪ್ರವೇಶಾತಿ ಪಡೆದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು ಕಡ್ಡಾಯವಾಗಿ ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸತಕ್ಕದ್ದು.

10. ವಿದ್ಯಾರ್ಥಿಗಳು ಚಾಲ್ತಿಯಲ್ಲಿರುವ ಪಠ್ಯಕ್ರಮ ಹಾಗೂ ಪರೀಕ್ಷಾ ಯೋಜನೆಗೆ ಅನುಗುಣವಾಗಿ ಪರೀಕ್ಷೆ ತೆಗೆದುಕೊಳ್ಳಬೇಕು.

11. ವಿದ್ಯಾರ್ಥಿಗಳು ತಮ್ಮ ಎಂ.ಎಸ್ಸಿ ಪದವಿ ವಿಷಯಕ್ಕೆ ಸಂಬಂಧಿಸಿದಂತೆ ಪರೀಕ್ಷಾ ಪ್ರವೇಶಾತಿ ಪತ್ರಗಳನ್ನು ಪರೀಕ್ಷೆಗಳು ಪ್ರಾರಂಭವಾಗುವ ಎರಡು ದಿನಗಳ ಮುಂಚೆ ವಿ.ವಿ. ನಿಲಯದ ಅಂತರ್ಜಾಲ www.ksoumysuru.ac.in ನಿಂದ ಪಡೆಯಬಹುದಾಗಿದೆ.

12. ಪರೀಕ್ಷಾ ಕೇಂದ್ರಗಳಿಗೆ ಮೊಬೈಲ್ ಫೋನ್ ತರುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಮೊಬೈಲ್ ಫೋನ್ ಪರೀಕ್ಷಾ ಕೇಂದ್ರಗಳಿಗೆ ತರುವುದು ದುರ್ನಡತೆ (Malpractice) ಯಾಗುತ್ತದೆ. ಅಂತಹ ವಿದ್ಯಾರ್ಥಿಗಳ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುತ್ತದೆ.

13. ಪ್ರಾಯೋಗಿಕ ಪರೀಕ್ಷೆಯ ಬಗೆಗೆ ಸಂಬಂಧಿಸಿದ ವಿಭಾಗದ ಮುಖ್ಯಸ್ಥರನ್ನು ಸಂಪರ್ಕಿಸುವುದು.

ಸಹಿ/-
ಕುಲಸಚಿವರು(ಪರೀಕ್ಷಾಂಗ)

ಗೆ,

1. ನೋಡೆಲ್ ಅಧಿಕಾರಿಗಳು, ವೆಬ್‌ಸೈಟ್ ನಿರ್ವಹಣೆ, ಕರಾಮುವಿ. ವಿಶ್ವವಿದ್ಯಾನಿಲಯದ ಅಂತರ್‌ಜಾಲದಲ್ಲಿ ಪ್ರಕಟಿಸುವಂತೆ ಕ್ರಮವಹಿಸುವುದು.
2. ಎಲ್ಲಾ ಪ್ರಾದೇಶಿಕ ನಿರ್ದೇಶಕರುಗಳು, ಕರಾಮುವಿ ಪ್ರಾದೇಶಿಕ ಕೇಂದ್ರಗಳು,ಕರಾಮುವಿ.